# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1153 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಮಾನ್ಯ ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 21-08-2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಆನ್‌ಲೈನ್ ಮೂಲಕ ಮದ್ಯ ಮಾರಾಟ ಮಾಡುವ ವ್ಯವಸ್ಥೆ ಬೇರೆ ರಾಜ್ಯಗಳಲ್ಲಿ ಜಾರಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆನ್‌ಲೈನ್ ಮೂಲಕ ಮದ್ಯ ಮಾರಾಟ ಮಾಡುವ ವ್ಯವಸ್ಥೆ ಭಾರತ ದೇಶದ **ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ** ರಾಜ್ಯಗಳಲ್ಲಿ ಜಾರಿಯಲ್ಲಿ ಇರುವುದು ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಆನ್‌ಲೈನ್ ಮೂಲಕ ಮದ್ಯ ಮಾರಾಟ ಮಾಡುವ ವ್ಯವಸ್ಥೆ ಜಾರಿಗೆ ರೂಪಿಸಿದೆಯೇ? (ಮಾಹಿತಿ ನೀಡುವುದು) | ಪರವಾನಗಿ ಪಡೆದಿರುವ ಮದ್ಯ ಮಾರಾಟ ಸನ್ನದುದಾರರ ಅಂಗಡಿಗಳಲ್ಲಿ ಮದ್ಯವನ್ನು ಖರೀದಿ ಮಾಡಿ ಸ್ವಿಗ್ಗಿ / ಝೊಮೋಟೋ ಮಾದರಿಯಲ್ಲಿ ಆನ್‌ಲೈನ್ ಮೂಲಕ ಗ್ರಾಹಕರು ತಮ್ಮ ಮನೆಗಳಿಗೆ ತರಿಸಿಕೊಳ್ಳಲು ಅನುಮತಿ ಇರುವುದಿಲ್ಲ.<br><br>ಆದಾಗ್ಯೂ, ಮದ್ಯ ಮಾರಾಟ ವ್ಯವಸ್ಥೆಯಲ್ಲಿ ಬದಲಾವಣೆ ತರಲು ಆನ್‌ಲೈನ್ ಮೂಲಕ ಮದ್ಯ ಮಾರಾಟ ಹಾಗೂ ಮದ್ಯ ಸರಬರಾಜು ಮಾಡುವ ಸಂಬಂಧ, ಮೆ: ಹಿಪ್ ಬಾರ್ ಪ್ರೈ. ಲಿಮಿಟೆಡ್ ಎಂಬ ಸಂಸ್ಥೆಗೆ ಪ್ರಾಯೋಗಿಕವಾಗಿ ಬಿ.ಬಿ.ಎಂ.ಪಿ ವ್ಯಾಪ್ತಿಗೆ ಮಾತ್ರ ಅನ್ವಯಿಸುವಂತೆ ಅಬಕಾರಿ ಕಾಯ್ದೆ ಮತ್ತು ಕಾನೂನುಗಳನ್ನು ಪಾಲನೆ ಮಾಡುವ ಷರತ್ತು ವಿಧಿಸಿ, ದಿನಾಂಕ:01-08-2017 ರಂದು ಒಂದು ವರ್ಷದ ಅವಧಿಗೆ (30-06-2018 ಮಾತ್ರ ಮುಂದಿನ ಸಾಲಿಗೆ ನವೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು) ಅಧಿಕಾರ ಪತ್ರ (Letter of Authority) ನೀಡಲಾಗಿರುತ್ತದೆ. ತದನಂತರ, ಸದರಿ ಅಧಿಕಾರ ಪತ್ರವನ್ನು ದಿನಾಂಕ:06-07-2018 ರಂದು ಒಂದು ವರ್ಷದ ಅವಧಿಗೆ (30-06-2019 ರವರೆಗೆ ಮಾತ್ರ ಮುಂದಿನ ಸಾಲಿಗೆ ನವೀಕರಿಸಿಕೊಳ್ಳುವ ಷರತ್ತಿಗೊಳಪಟ್ಟು) ಅಧಿಕಾರ ಪತ್ರ (Letter of Authority) ನೀಡಲಾಗಿರುತ್ತದೆ.<br><br>ತದನಂತರ, ಮೆ: ಹಿಪ್ ಬಾರ್ ಪ್ರೈ. ಲಿಮಿಟೆಡ್ ಎಂಬ ಸಂಸ್ಥೆಯು ಅಬಕಾರಿ ಕಾಯ್ದೆ ಮತ್ತು ನಿಯಮಗಳನ್ನು |

| | | |
|---|---|---|
| | | ಉಲ್ಲಂಘಿಸಿರುವುದು ಕಂಡು ಬಂದಿದ್ದರಿಂದ, ಪ್ರಕರಣಗಳನ್ನು ದಾಖಲು ಮಾಡಿ, ಮೆ: ಹಿಪ್ ಬಾರ್ ಪ್ರೈ. ಲಿಮಿಟೆಡ್ ಇವರಿಗೆ ನೀಡಿದ್ದ ಅಧಿಕಾರ ಪತ್ರವನ್ನು ಹಿಂಪಡೆಯಲಾಗಿರುತ್ತದೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ ಮೆ: ಹಿಪ್ ಬಾರ್ ಪ್ರೈವೇಟ್ ಲಿಮಿಟೆಡ್ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ :6448/2019 ಪ್ರಕರಣವನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಆನ್‌ಲೈನ್ ನಲ್ಲಿ ಮದ್ಯವನ್ನು ಮಾರಾಟ ಮಾಡಲು ಅಬಕಾರಿ ಕಾಯ್ದೆಯಲ್ಲಿ ಅವಕಾಶ ಇಲ್ಲದಿರುವುದರಿಂದ ಪ್ರಕರಣವನ್ನು ವಿಲೇಗೊಳಿಸಿ ಆದೇಶಿಸಿರುತ್ತದೆ.<br><br>ಸದರಿ ಆದೇಶದ ವಿರುದ್ಧ ಮೆ: ಹಿಪ್ ಬಾರ್ ಪ್ರೈವೇಟ್ ಲಿಮಿಟೆಡ್ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ:3834/2019 ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ರಿಟ್ ಅಪೀಲು ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:18-02-2021 ರಂದು "By no stretch of imagination the appellant-company can be permitted to trade in liquor as prayed under the relief clause. The learned Single Judge was justified in dismissing the writ petition and no case for interference is made out in the matter. Accordingly, the writ appeal also stands dismissed." ಎಂದು ಆದೇಶ ಹೊರಡಿಸಿರುತ್ತದೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ಸಂಖ್ಯೆ:4719/2021 ರಲ್ಲಿ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:04-08-2021 ರಂದು ಪ್ರಕರಣವನ್ನು ವಜಾಗೊಳಿಸಿ ಆದೇಶಿಸಿರುತ್ತದೆ. |

**ಆಇ 84 ಇಎಲ್‌ಕ್ಯೂ 2025**

**(ಆರ್.ಬಿ.ತಿಮ್ಮಾಪುರ)**
**ಅಬಕಾರಿ ಸಚಿವರು**